ಆದಾಯವು 9 ಲಕ್ಷ ರೂಗಳಿಗಿಂತ ಕಡಿಮೆ ಇರತಕ್ಕದ್ದಲ್ಲ. ಅಥವಾ ತಲಾ 45 ರೂಗಳಂತೆ, ಆದಾಯವನ್ನು ಲೆಕ್ಕಹಾಕಿದಾಗ ಒದಗಿಬರುವ ಮೊತ್ತವು ಎಷ್ಟಾಗುತ್ತದೋ ಇವೆರಡರಲ್ಲಿ ಹೆಚ್ಚು ಯಾವುದಾಗುವುದೋ, ಆ ಗರಿಷ್ಠ ಆದಾಯವನ್ನು ಪರಿಗಣಿಸತಕ್ಕದ್ದು.

ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ 50 ಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

ಈ) ಕೇಂದ್ರ ಸರ್ಕಾರದ ಜನಗಣತಿ ನಿರ್ದೇಶನಾಲಯವು 2001ನೇ ಸಾಲಿನ ಜನಗಣತಿ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿರುವುದರಿಂದ31-3-2001 ರವರೆಗೆ ಹೊಸದಾಗಿ ಪುರಸಭೆ ರಚಿಸುವ ಬಗ್ಗೆ ನಿರ್ಬಂಧ ಇರುತ್ತದೆ. ದಿನಾಂಕ: 31-3-2001ರ ನಂತರ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಬಂದಲ್ಲಿ ವಿಷಯವನ್ನು ಪರಿಶೀಲಿಸಲಾಗುವುದು.

ಉ) ಮೇಲಿನಂತೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹಾಸ್ಟೆಲ್‌ಗಳ ಸ್ಥಾಪನೆ

4786 - ಶ್ರೀ ರಾಜೇಂದ್ರವರ್ಮ (ಹುಲ್‌ಸೂರ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಬೀದರ್ ಜಿಲ್ಲೆಯಲ್ಲಿ ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ? (ಗ್ರಾಮಾವಾರು ವಿವರಗಳನ್ನು ಒದಗಿಸುವುದು).*

ಆ) *ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ವಿಶೇಷವಾಗಿ ಹುಲಸೂರು ಮತಕ್ಷೇತ್ರದ ಯಾವ ಯಾವ ಗ್ರಾಮಗಳಲ್ಲಿ ಹೊಸದಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿನಿಲಯಗಳನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಪ್ರಸ್ತಾವನೆಯು ಸರ್ಕಾರದ ಪರೀಶಿಲನೆಯಲ್ಲಿ ದೆಯೇ ? ಹಾಗೂ ಸರ್ಕಾರವು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?*

ಇ) *ಕಡ್ಡಾಯವಾಗಿ ಹೋಬಳಿಗಳಲ್ಲಿ ಅಂಬೇಡ್ಕರ್ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೇಲ್ಕಂಡ ವರ್ಗಗಳ ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರಕ್ಕೆ ಬೀದರ್ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಕಳಿದ ಒಂದು ವರ್ಷದ ಅವಧಿಯಲ್ಲಿ ಕಳುಹಿಸಿರುವುದು ನಿಜವೇ ? ಹಾಗಿದ್ದಲ್ಲಿ ಈ ಪ್ರಸ್ತಾವನೆಯ ಬಗ್ಗೆ ಸರ್ಕಾರದ ಕ್ರಮಗಳೇನು ?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಒಟ್ಟು49 ಸರ್ಕಾರಿ ವಿದ್ಯಾರ್ಥಿನಿಲಯಗಳಿವೆ. (ಗ್ರಾಮಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ). ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳ ಯಾವುದೇ ವಿದ್ಯಾರ್ಥಿನಿಲಯಗಳು ಇರುವುದಿಲ್ಲ.

ಆ) 2000-01ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕು ಸಂತಾಪುರಕ್ಕೆ 50 ಸಂಖ್ಯಾಬಲವುಳ್ಳ ಒಂದು ಸರ್ಕಾರಿ ಬಾಲಕರ ಕಾಲೇಜು ವಿದ್ಯಾರ್ಥಿನಿಲಯವನ್ನು ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ವಿಷಯವು ಸದ್ಯಕ್ಕೆ ಸರ್ಕಾರರ ಮುಂದಿರುವುದಿಲ್ಲ.

ಬೀದರ್ ಜಿಲ್ಲೆ, ಭಾಲ್ಕಿ ತಾಲ್ಲೂಕು, ಹುಲಸೂರು ಮತಕ್ಷೇತ್ರದ, ಧನ್ನೂರು ಹೆಚ್, ಗ್ರಾಮದಲ್ಲಿ ಒಂದು ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದ್ದು ಅದು ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಯಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಲು ಅವಕಾಶವಿರುವುದಿಲ್ಲ.

ANNEXURE

SL.No.	Name of the Hostel	Location
BIDAR DISTRICT :		
1.	Government Boys Hostel	Aurad
2.	Government Boys Hostel	Kamalanagar
3.	Government Boys Hostel	Lakkangaon
4.	Government Boys Hostel	Basavakalyan
5.	Government Boys Hostel	Hulsoor
6.	Government Boys Hostel	Mudbi
7.	Government Boys Hostel	Rajeshwara
8.	Government Boys Hostel	Yerabaga
9.	Government Boys Hostel	Bhalki
10.	Government Boys Hostel	Kthaka Chincholi
11.	Government Boys Hostel	Mehakar
12.	Government Boys Hostel	Nittur
13.	Government Boys Hostel	Varwatti
14.	Government Boys Hostel	Chidri

SL.No.	Name of the Hostel	Location
15.	Government Boys Hostel	Janawada Road, Bidar
16.	Government Boys Hostel	Janwada
17.	Government Boys Hostel	Kadabada
18.	Government Boys Hostel	Malegoan
19.	Government Boys Hostel	Muttanagi
20.	Government Boys Hostel	Nowbad
21.	Government Boys Hostel	Sidditalim
22.	Government Boys Hostel	Bemal Khed
23.	Government Boys Hostel	Chittaguppa
24.	Government Boys Hostel	Dubalgundi
25.	Government Boys Hostel	Hallikhed
26.	Government Boys Hostel	Hudgi
27.	Government Boys Hostel	Humnabad
28.	Government Boys Hostel	Mannekahalli
29.	Government Girls Hostel	Aurad
30.	Government Girls Hostel	Basavakalyan
31.	Government Girls Hostel	Hulsoor
32.	Government Girls Hostel	Bhalki
33.	Government Girls Hostel	Nittur
34.	Government Girls Hostel	Bidar
35.	Government Girls Hostel	Chittaguppa
36.	Government Girls Hostel	Humnabad
37.	Government College Hostel	Bidar
38.	Governrment College Hostel	Bidar
39.	Governrment College Hostel	Bhalki
40.	Governrment College Hostel	Basavakalyan
41.	PUC College Hostel	Naubad, Bidar

SL.No.	Name of the Hostel	Location
42.	Governrment College Hostel-I	Mylur, Bidar
43.	Government College Hostel-II	Mylur, Bidar
44.	Government College Hostel	Bhalki
45.	Government College Hostel	Aurad
46.	Government College Hostel	Basavakalyan
47.	Government College Hostel	Humnabad
48.	Government College Hostel	Bidar
49.	Government College Hostel	Basavakalyan

ಹುಲ್‌ಸೂರ್ ಮತ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವುದು

4787 - ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಹುಲುಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವ ಉದ್ಯಮಿಗಳಿಗೆ ಸರ್ಕಾರ ಯಾವ ಯಾವ ಅನುಕೂಲಗಳನ್ನು ಕಲ್ಪಿಸಿದೆ ? ಯಾವ ಯಾವ ಉತ್ತೇಜನಗಳನ್ನು ನೀಡುತ್ತದೆ ?*

ಆ) *ಈ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗಾರಿಕಾ ಗುರುತಿಸಲಾಗಿದೆಯೇ ? ಕೈಗಾರಿಕಾ ವಲಯಗಳನ್ನು ಸ್ಥಾಪಿಸಲಾಗಿದೆಯೇ ? ಸಣ್ಣ ಉದ್ಯಮವನ್ನು ಸ್ಥಾಪಿಸುವವರಿಗೆ ಶೆಡ್ಡುಗಳನ್ನು ನಿರ್ಮಿಸಲಾಗಿದೆಯೇ ? ಇದಕ್ಕಾಗಿ ಕಳೆದ 1 ವರ್ಷದಿಂದ ವೆಚ್ಚ ಮಾಡಲಾಗಿರುವ ಹಣವೆಷ್ಟು ? (ಪೂರ್ಣ ವಿವರಗಳನ್ನು ಒದಗಿಸುವುದು)*

ಇ) *ಹುಲುಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸುವವರಿಗೆ ಮೇಲ್ಕಂಡ ಯಾವ ಸೌಲಭ್ಯಗಳನ್ನು ಒದಗಿಸದೇ ಇರುವುದು ನಿಜವಲ್ಲವೇ ?*

ಈ) *ಹಾಗಿದ್ದಲ್ಲಿ ಈ ಮತಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲಿರುವ ಉದ್ಯಮಗಳಿಗೆ ಸರ್ಕಾರವು ಯಾವ ಯಾವ ಉತ್ತೇಜನಗಳನ್ನು ಹಾಗೂ ರಿಯಾಯಿತಿಗಳನ್ನು ಒದಗಿಸಲ್ಲಿದೆ ? ಇದಕ್ಕಾಗಿ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ?*

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) ಹುಲುಸೂರು ಮತಕ್ಷೇತ್ರವು ಕೈಗಾರಿಕಾ ನೀತಿಯಂತೆ ವಲಯ 2ರಲ್ಲಿರುವ ಈ ಕ್ಷೇತ್ರದಲ್ಲಿ ಸ್ಥಾಪಿಸುವ ಉದ್ದಿಮೆಗಳಿಗೆ ರಾಜ್ಯ ಸರ್ಕಾರದ ಕೈಗಾರಿಕಾ ನೀತಿ 1996-2001 ರನ್ವಯ ಉತ್ತೇಜನ ಮತ್ತು ರಿಯಾಯಿತಿಗಳು ಲಭ್ಯವಿದೆ. ಆಂದರೆ ಸ್ಥಿರಾಸ್ತಿಯಲ್ಲಿ ತೊಡಗಿಸಿದ ಬಂಡವಾಳದ ಮೇಲೆ ಶೇ. 25ರಂತೆ